


بسم اللهِ الرّحمٰن الرّحيم

# ಮುಸ್ಲಿಹ್ ಮೌಊದ್ – ಭವಿಷ್ಯವಾಣಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–02–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಪ್ರತಿ ಅಹ್ಮದಿಗೆ ಗೊತ್ತಿರುವಂತೆ ಫೆಬ್ರವರಿ 20ರ ದಿನಾಂಕ **ಪೇಶ್‌ಗೋಯಿ ಮುಸ್ಲಿಹ್ ಮೌಊದ್**(ರ) ಸಂಬಂಧವಾಗಿ ನೆನಪಿಡಲಾಗುತ್ತದೆ. ಇದಕ್ಕೆ ಸಂಬಂಧಪಟ್ಟು ಜಮಾಅತುಗಳಲ್ಲಿ ಜಲ್ಸಗಳು ಸಹ ನಡೆಸಲಾಗುತ್ತದೆ. ಅದು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಅನೇಕ ವೈಶಿಷ್ಟ್ಯಗಳನ್ನು ಹೊಂದಿರುವ ಓರ್ವ ಪುತ್ರ ಜನಿಸುವುದರ ಭವಿಷ್ಯವಾಣಿಯಾಗಿತ್ತು.

(ಮುಸ್ಲಿಹ್ ಮೌಊದ್(ರ)ರ ಕುರಿತು ಇರುವ ಭವಿಷ್ಯವಾಣಿಯನ್ನು ಹುಝೂರ್ ಓದಿ ಹೇಳಿದರು ಹಾಗೂ ಭವಿಷ್ಯವಾಣಿಯಲ್ಲಿ ಹೇಳಿದ ಕಾಲಾವಧಿಯೊಳಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಜನಿಸಿದ್ದು ಮತ್ತು ಅವರು ಆ ಭವಿಷ್ಯವಾಣಿಯ ಸಾಕ್ಷಾತ್ಕಾರವಾದುದರ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದರು. ನಂತರ ಹುಝೂರ್ ಹೇಳಿದರು:)

ಈಗ ನಾನು ಹಝ್ರತ್ ಮುಸ್ಲಿಹ್ ಮೌಊದ್(ರ)ರ ಜ್ಞಾನಪರವಾದ ಮತ್ತು ವಿವಿಧ ಕಾರ್ಯಸಾಧನೆಗಳಲ್ಲಿ ಕೆಲವು ಸಂಗತಿಗಳ ಬಗ್ಗೆ ಪ್ರಸ್ತಾಪಿಸುವೆನು. ಆರೋಗ್ಯದ ದೃಷ್ಟಿಯಲ್ಲಿ ಹಝ್ರತ್ ಮುಸ್ಲಿಹ್ ಮೌಊದ್‌ರ ಬಾಲ್ಯ ಬಹಳ ಬಲಹೀನವಾಗಿ ಕಳೆದಿತ್ತು ಎಂಬ ಸಂಗತಿ ಮೊದಲು ನಮ್ಮ ಮುಂದಿರಬೇಕು. ಅವರಿಗೆ ಲಭಿಸಿದ ಲೌಕಿಕ ಶಿಕ್ಷಣ ಹೆಸರಿಗೆ ಮಾತ್ರವಾಗಿತ್ತು. ಆದರೆ ಬಾಹ್ಯ ಮತ್ತು ಆಂತರಿಕ ಅರಿವಿನಿಂದ ಅವರನ್ನು ತುಂಬಿಸಲಾಗುವುದು ಎಂಬ ಅಲ್ಲಾಹನ ವಾಗ್ದಾನವಿದ್ದ ಕಾರಣದಿಂದ ಆಶ್ಚರ್ಯಕರವಾದ ಭಾಷಣಗಳನ್ನು ಮತ್ತು ಖುತ್ಬಗಳನ್ನು ಅವರು ನೀಡುವಂತೆ ಅಲ್ಲಾಹನು ಮಾಡಿದನು. ಅತುಲ್ಯವಾದ ಲೇಖನಗಳನ್ನು ಅವರು ಬರೆದರು. ಅನ್ಯರು ಕೂಡ ಅದನ್ನು ಅಂಗೀಕರಿಸುತ್ತಾರೆ. ಇಂದು ಈ ಸಂಬಂಧವಾಗಿ ನಾನು ಕೆಲವು ಉಲ್ಲೇಖಗಳನ್ನು ಮುಂದಿರಿಸುತ್ತೇನೆ. ಆದರೆ ಅದಕ್ಕೆ ಮುಂಚಿತವಾಗಿ ನಾನು ಅವರ ಗ್ರಂಥಗಳು, ಖುತ್ಬಗಳು, ಲೇಖನಗಳು, ಭಾಷಣಗಳು, ಪ್ರಶ್ನೋತ್ತರ ಸಭೆಗಳು ಇತ್ಯಾದಿಗಳ ಸಂಖ್ಯೆಯನ್ನು ನಿಮ್ಮ ಮುಂದಿರಿಸುತ್ತೇನೆ.

ಈ ಪ್ರಕಟಿಸಲಾದ ಅಥವಾ ಪೂರ್ಣಗೊಂಡು ಪ್ರಕಟಣೆಗೊಳ್ಳಲು ತಯಾರಾಗಿರುವ ಮತ್ತು **ಅನ್ವಾರುಲ್ ಉಲೂಮ್** ಎಂಬ ಹೆಸರಿನಿಂದ ಪ್ರಕಟಣೆಗೊಳ್ಳುವ ಅವರ ಗ್ರಂಥಗಳು, ಖುತ್ಬಗಳು, ಭಾಷಣಗಳು, ಸಂದೇಶಗಳು, ಲೇಖನಗಳು ಇತ್ಯಾದಿಗಳು ಒಟ್ಟು 38 ಸಂಪುಟಗಳು ಆಗುವುವು ಮತ್ತು ಅದರ ಒಟ್ಟು ಸಂಖ್ಯೆ 1424 ಆಗಿದೆ. ಅದರ ಒಟ್ಟು ಪುಟಗಳು ಅಂದಾಜು 20340 ಆಗುವುವು. ತಫ್ಸೀರ್ ಕಬೀರ್, ತಫ್ಸೀರ್ ಸಗೀರ್ ಮತ್ತು ಇತರ ವ್ಯಾಖ್ಯಾನ ವಿಷಯಗಳ ಪುಟಗಳ ಸಂಖ್ಯೆ 28735 ಆಗಿವೆ. 1808 ಜುಮಾ ಖುತ್ಬಗಳು, 51 ಈದುಲ್ ಫಿತ್ರ್ ಖುತ್ಬಗಳು, 42 ಈದುಲ್ ಅಝ್‌ಹಾ ಖುತ್ಬಗಳು, 150 ನಿಕಾಹ್ ಖುತ್ಬಗಳು ಹಾಗೂ ಈಗಾಗಲೇ ಪ್ರಕಾಶನಗೊಂಡ ಖಿತಾಬಾತೆ ಶೂರಾದ ಒಂದನೇ ಮತ್ತು ಮೂರನೇ ಸಂಪುಟಗಳು ಹಾಗೆ ಒಟ್ಟು ಅದರ ಪುಟಗಳು 2131 ಆಗಿವೆ. ಎಲ್ಲ ಪುಟಗಳನ್ನು ಒಟ್ಟುಗೂಡಿಸಿದರೆ ಸುಮಾರು 75 ಸಾವಿರ ಪುಟಗಳು ಆಗುತ್ತವೆ.

(ರಿಸರ್ಚ್ ಸೆಲ್ ಮುಂದಿಟ್ಟ, ಇನ್ನೂ ಪ್ರಕಟಣೆಗೊಳ್ಳದ ಲೇಖನಗಳು, ಭಾಷಣಗಳು, ಪ್ರಶ್ನೋತ್ತರಗಳ ಅವಲೋಕನವನ್ನು ಹುಝೂರ್ ಮುಂದಿರಿಸಿದರು. ಹುಝೂರ್ ಹೇಳಿದರು:) ಇದು ಬಹಳ ದೊಡ್ಡದಾದ ಅರಿವಿನ ಭಂಡಾರವಾಗಿದೆ. ಈಗ ನಾನು ಅವರ ಜ್ಞಾನಪರವಾದ ಕಾರ್ಯಸಾಧನೆಗಳಲ್ಲಿ ಪವಿತ್ರ ಖುರ್‌ಆನಿನ ತರ್ಜುಮೆ ಮತ್ತು ವ್ಯಾಖ್ಯಾನದ ಕೆಲವು ಅಂಕಿಅಂಶಗಳನ್ನು ಮತ್ತು ಅನ್ಯರ ಕೆಲವು ಅನಿಸಿಕೆಗಳನ್ನು ಮುಂದಿರಿಸುತ್ತೇನೆ. ತಫ್ಸೀರ್ ಕಬೀರ್‌ನಲ್ಲಿ ಅವರು 59 ಅಧ್ಯಾಯಗಳ ವ್ಯಾಖ್ಯಾನವನ್ನು ಮಾಡಿದ್ದಾರೆ. ಅದು ಹತ್ತು ಸಂಪುಟಗಳಲ್ಲಿ ಪ್ರಕಟಣೆಗೊಂಡಿವೆ. ಅವರ ಅನೇಕ ವ್ಯಾಖ್ಯಾನ ಟಿಪ್ಪಣಿಗಳು ಕೂಡ ಲಭಿಸಿವೆ. ಅದರ ಸಂಖ್ಯೆ ಸಾವಿರದಷ್ಟು ಇವೆ. ಅದು ಕೂಡ ಯಾವಾಗಲಾದರೂ ಪ್ರಕಟಣೆಗೊಳ್ಳುವುದು. ತಫ್ಸೀರೇ ಸಗೀರ್‌ನ ಹೆಸರಿನಲ್ಲಿ ವಾಕ್ಯ ರೂಪದ ಪವಿತ್ರ ಖುರ್‌ಆನಿನ ತರ್ಜುಮೆ ಅವರ ಬಹಳ ಹಿರಿದಾದ ಕೆಲಸವಾಗಿದೆ.

ತಫ್ಸೀರೇ ಸಗೀರ್‌ನ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದೆಡೆ ಹೇಳಿದರು: ನನ್ನ ಅಭಿಪ್ರಾಯ ಪ್ರಕಾರ ಇಲ್ಲಿಯ ವರೆಗೂ ಮಾಡಲಾದ ಪವಿತ್ರ ಖುರ್‌ಆನಿನ ತರ್ಜುಮೆಗಳಲ್ಲಿ ಯಾವುದರಲ್ಲೂ ಉರ್ದು ವಾಕ್ಯರಚನೆ ಮತ್ತು ಅರಬಿ ವಾಕ್ಯಗಳ ಕುರಿತು ಅಷ್ಟು ಗಮನ ಹರಿಸಲಾಗಿರಲಿಲ್ಲ. ಕಳೆದ 13 ಶತಮಾನಗಳಲ್ಲಿ ಬಹಳ ಸಮರ್ಥರಾದ ಜವಾನರು ದಾಟಿಹೋದರು. ಆದರೆ ಅಲ್ಲಾಹನು ನನಗಲ್ಲದೆ ಬೇರೆ ಯಾರಿಗೂ ಅದನ್ನು ಮಾಡಲು ಸೌಭಾಗ್ಯ ನೀಡಲಿಲ್ಲ. ಸತ್ಯದಲ್ಲಿ ಇದು ಅಲ್ಲಾಹನ ಕೆಲಸವಾಗಿದೆ. ತಾನು ಇಚ್ಛಿಸುವವರಿಂದ ಅವನು ಅದನ್ನು ಮಾಡಿಸುತ್ತಾನೆ..... ಅಲ್ಲಾಹನ ಅನುಗ್ರಹ ಮತ್ತು ಕೃಪೆಯಿಂದ ಪವಿತ್ರ ಖುರ್‌ಆನಿನ ತರ್ಜುಮೆ ಪೂರ್ತಿಯಾಗಿದೆ. ಎಂದರೆ **ಅಲ್‌ಹಮ್ದುಲಿಲ್ಲಾಹ್** ದಿಂದ **ವನ್ನಾಸ್** ತನಕ ಕಿರಿಯ ವ್ಯಾಖ್ಯಾನದೊಂದಿಗೆ. ಇದನ್ನು ತಫ್ಸೀರ್ ಕಬೀರ್‌ನೊಂದಿಗೆ ಹೋಲಿಸಿ ನೋಡಲಾಗುವಾಗ ತಿಳಿದುಬರುವುದೇನೆಂದರೆ, ತಫ್ಸೀರ್ ಕಬೀರ್‌ನಲ್ಲಿ ಕೂಡ ಇಲ್ಲದ ಅನೇಕ ವಿಷಯಗಳು ಇದರಲ್ಲಿ ಸಂಕ್ಷೇಪವಾಗಿ ನೀಡಲಾಗಿದೆ.

ಅದೇ ರೀತಿ **ಫೈವ್ ವಾಲ್ಯೂಮ್ ಕಮೆಂಟರಿ** ಎಂಬ ಹೆಸರಿನಲ್ಲಿರುವ ಇಂಗ್ಲಿಷ್ ಖುರ್‌ಆನ್ ವ್ಯಾಖ್ಯಾನವು ಸಹ ಬಹಳ ಮುಖ್ಯವಾದ ಕೆಲಸವಾಗಿದೆ. ಈ ವ್ಯಾಖ್ಯಾನ ಗ್ರಂಥದ ಆರಂಭದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆದ ಅತ್ಯಂತ ಜ್ಞಾನಭರಿತ ಮುನ್ನುಡಿಯನ್ನು ಸೇರಿಸಲಾಗಿದೆ. ಇತರ ಆಧ್ಯಾತ್ಮಿಕ ಗ್ರಂಥಗಳು ಇದ್ದಾಗ್ಯೂ ಪವಿತ್ರ ಖುರ್‌ಆನಿನ ಆವಶ್ಯಕತೆ, ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಜೀವನ, ಪವಿತ್ರ ಖುರ್‌ಆನಿನ ಸಂಕಲನ ಮತ್ತು ಪವಿತ್ರ ಖುರ್‌ಆನಿನ ಅಧ್ಯಾಪನೆಗಳ ಕುರಿತು ಅದರಲ್ಲಿ ಅತ್ಯಂತ ಆಕರ್ಷಕ ರೀತಿಯಲ್ಲಿ ಬೆಳಕು ಬೀರಲಾಗಿದೆ. ಈ ಮುನ್ನುಡಿಯ ಕೊನೆಯಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆಯೂ ಬರೆದಿರುವರು: ನಾನು ಇದನ್ನು ಕೂಡ ಹೇಳಲು ಬಯಸುತ್ತೇನೆ. ನಾನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)ರ ಶಿಷ್ಯನಾಗಿದ್ದ ಕಾರಣದಿಂದ ಅವರಿಂದ ಕಲಿತ ಅನೇಕ ವಿಷಯಗಳು ಸಹ ನನ್ನ ವ್ಯಾಖ್ಯಾನದಲ್ಲಿ ಖಂಡಿತ ಬಂದಿವೆ. ಆದ್ದರಿಂದ ಈ ವ್ಯಾಖ್ಯಾನದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ವ್ಯಾಖ್ಯಾನ, ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)ರ ವ್ಯಾಖ್ಯಾನ ಮತ್ತು ನನ್ನ ವ್ಯಾಖ್ಯಾನ ಕೂಡ ಬರುವುದು. ಈ ಕಾಲಕ್ಕೆ ಆವಶ್ಯಕವಾದ ಜ್ಞಾನಗಳಿಂದ ತುಂಬಿಸಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕಳುಹಿಸಿದ್ದನು. ಆದ್ದರಿಂದ ಈ ವ್ಯಾಖ್ಯಾನದಿಂದ ಅನೇಕ ರೋಗಿಗಳು ಗುಣಮುಖವಾಗುವರು ಎಂದು ನನಗೆ ಪ್ರತೀಕ್ಷೆಯಿದೆ. ಅನೇಕ ಕುರುಡರು ಇದರ ಮೂಲಕ ದೃಷ್ಟಿ ಪಡೆಯುವರು. ಕಿವುಡರು ಕೇಳುವವರಾಗುವರು, ಮೂಗರು ಮಾತನಾಡುವವರಾಗುವರು, ಕುಂಟರು ಮತ್ತು ಅಂಗವಿಕಲರು ನಡೆಯುವವರಾಗುವರು. ಅಲ್ಲಾಹನ ದೇವದೂತರು ಇದರ ವಿಷಯಗಳನ್ನು ಅನುಗ್ರಹಿಸುವರು. ಇದನ್ನು ಪ್ರಕಟಣೆಗೊಳಿಸುವ ಉದ್ದೇಶವನ್ನು ಇದು ಈಡೇರಿಸುವುದು – **ಅಲ್ಲಾಹುಮ್ಮ ಆಮೀನ್**.

ತಫ್ಸೀರ್ ಕಬೀರ್‌ನ ಕುರಿತು ಅಲ್ಲಾಮ ನಿಯಾಝ್ ಫತಹ್‌ಪೂರಿ ಹೇಳುತ್ತಾರೆ: ಪವಿತ್ರ ಖುರ್‌ಆನಿನ ಅಧ್ಯಯನದ ಒಂದು ಹೊಸ ರೀತಿಯನ್ನೇ ಅವರು ಉಂಟು ಮಾಡಿರುವರು ಎಂಬುದರಲ್ಲಿ ಸಂಶಯವಿಲ್ಲ. ಇದು ಈ ಶೈಲಿಯ ಮೊದಲ ತಫ್ಸೀರ್ ಆಗಿದೆ. ಇದರಲ್ಲಿ ಬುದ್ಧಿ ಮತ್ತು ಪ್ರಮಾಣವನ್ನು ಬಹಳ ಸುಂದರವಾಗಿ ಸಮನ್ವಯಗೊಳಿಸಲಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ನಿಧನಗೊಂಡಾಗ ಮೌಲಾನ ಅಬ್ದುಲ್ ಮಾಜಿದ್ ದರ್‌ಯಾಬಾದಿ ಹೀಗೆ ಬರೆದರು: ಪವಿತ್ರ ಖುರ್‌ಆನ್ ಮತ್ತು ಪವಿತ್ರ ಖುರ್‌ಆನಿನ ಜ್ಞಾನಗಳನ್ನು ಲೋಕದೆಲ್ಲೆಡೆ ಪ್ರಸಾರಗೊಳಿಸಲಿಕ್ಕಾಗಿ ಮತ್ತು ಇಸ್ಲಾಮಿನ ಜಾಗತಿಕ ಪ್ರಚಾರಕ್ಕಾಗಿ ಅವರು ಕ್ರಿಯಾಶೀಲರಾಗಿ ಮತ್ತು ಧೈರ್ಯದಿಂದ ತನ್ನ ದೀರ್ಘ ಆಯುಸ್ಸಿನಲ್ಲಿ ಜಾರಿಯಲ್ಲಿರಿಸಿದ ಪ್ರಯತ್ನಗಳಿಗೆ ಅಲ್ಲಾಹನು ಪ್ರತಿಫಲ ನೀಡಲಿ.

ತಫ್ಸೀರ್ ಸಗೀರ್‌ನ ಕುರಿತು **'ಅಮ್‌ರೋಝ್'** ವಾರ್ತಾಪತ್ರಿಕೆ ಹೀಗೆ ಬರೆಯಿತು: ಈಗ ನಮ್ಮ ಮುಂದೆ ತಫ್ಸೀರ್ ಸಗೀರ್ ಇದೆ. ಇದು ಅಹ್ಮದಿಯಾ ಜಮಾಅತಿನ ನೇತಾರ ಅಲ್‌ಹಾಜ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್‌ರ ಪ್ರಯತ್ನದ ಫಲವಾಗಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಅರಬಿ ವಚನದ ಉರ್ದು ಅನುವಾದದೊಂದಿಗೆ ಅನೇಕ ಸ್ಥಳಗಳಲ್ಲಿ ಟಿಪ್ಪಣಿಗಳನ್ನು ಮತ್ತು ವ್ಯಾಖ್ಯಾನಗಳನ್ನು ನೀಡಲಾಗಿದೆ. ತರ್ಜುಮೆ ಮತ್ತು ಟಿಪ್ಪಣಿಗಳ ಭಾಷೆ ಅತ್ಯಂತ ಸರಳ ಮತ್ತು ಎಲ್ಲರಿಗೂ ಮನವರಿಕೆಯಾಗುವಂಥದ್ದಾಗಿದೆ.

1966ರಲ್ಲಿ ವಾರಪತ್ರಿಕೆ **'ಖಿಂದೀಲ್'** ಹೀಗೆ ಬರೆಯಿತು: ಪ್ರತಿಯೊಬ್ಬ ವಿದ್ಯಾವಂತನು ಪ್ರಯೋಜನ ಪಡೆಯುವ ರೀತಿಯಲ್ಲಿ ತಫ್ಸೀರ್ ಸಗೀರ್‌ನ ತರ್ಜುಮೆ ಮತ್ತು ಟಿಪ್ಪಣಿಯ ಭಾಷೆ ಸರಳವಾಗಿದೆ. ಈ ತರ್ಜುಮೆ ಮತ್ತು ವ್ಯಾಖ್ಯಾನವನ್ನು ಬರೆಯುವಾಗ ಹಿಂದಿನ ಎಲ್ಲ ವ್ಯಾಖ್ಯಾನಗಳನ್ನು ಮುಂದಿರಿಸಲಾಗಿತ್ತು. ಪವಿತ್ರ ಖುರ್‌ಆನನ್ನು ಇಷ್ಟು ಸುಂದರವಾಗಿ ಪ್ರಕಟಗೊಳಿಸುವುದು ಇಸ್ಲಾಮಿನ ದೊಡ್ಡ ಸೇವೆಯಾಗಿದೆ.

ಇಂಗ್ಲಿಷ್ ಖುರ್‌ಆನಿನ ಧಾರ್ಮಿಕ ಮತ್ತು ಸಾಹಿತ್ಯದ ಸೌಂದರ್ಯವು ಯುರೋಪಿನ ದೊಡ್ಡ ದೊಡ್ಡ ವಿದ್ಯಾವಂತರನ್ನು ಪ್ರಭಾವಿತಗೊಳಿಸಿತ್ತು. ಉದಾಹರಣೆಗೆ ಪ್ರಸಿದ್ಧ ಸ್ಕಾಲರ್ ಎ. ಆರ್ಬರಿ ಹೇಳುತ್ತಾರೆ: ವ್ಯಾಖ್ಯಾನದ ಆರಂಭದಲ್ಲಿ ಒಂದು ವಿಶದವಾದ ಮುನ್ನುಡಿಯಿದೆ. ಅದನ್ನು ಸ್ವತಃ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಬರೆದಿರುವರು. ಇದನ್ನು ನಾವು ಇಸ್ಲಾಮಿನ ಸಂಶೋಧನಾತ್ಮಕ ಜ್ಞಾನದ ಅಭಿರುಚಿಯ ಮಹತ್ತಾದ ಸ್ಮಾರಕವೆಂದು ಹೇಳಿದರೆ ಅದರಲ್ಲಿ ಯಾವುದೇ ಅತಿಶಯೋಕ್ತಿಯಿಲ್ಲ. ಇದರ ತಯಾರಿಯ ಪ್ರತಿಯೊಂದು ಹಂತದಲ್ಲಿ ಅಧಿಕೃತ ವ್ಯಾಖ್ಯಾನ, ನಿಘಂಟು ಮತ್ತು ಸಂಶೋಧನಾತ್ಮಕ ಗ್ರಂಥಗಳಿಂದ ಪ್ರಯೋಜನ ಪಡೆಯಲಾಗಿದೆ. ಇಂಗ್ಲಿಷ್ ತರ್ಜುಮೆ ತಪ್ಪುರಹಿತವೂ ಸಭ್ಯವೂ ಆಗಿದೆ. ಮುಸ್ಲಿಮೇತರರ ಆಕ್ಷೇಪಗಳಿಗೆ ಉತ್ತರವೂ ಇದರಲ್ಲಿ ಇದೆ.

ಭಾಷಣಗಳ ರೂಪದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ನಮ್ಮ ಮುಂದೆ ಇರಿಸಿರುವ ಅರಿವಿನ ಖಜಾನೆಯನ್ನು ಅನ್ಯರು ಹೇಗೆ ನೋಡಿದ್ದರು ಎಂಬುದಕ್ಕೆ ಒಂದು ಉದಾಹರಣೆ ಅವರ **ನಿಝಾಮೆ ನೌ** ಎಂಬ ಭಾಷಣವಾಗಿದೆ. ಅದರ ಕುರಿತು ಈಜಿಪ್ಟಿನ ಸ್ಕಾಲರ್ ಅಬ್ಬಾಸ್ ಮಹ್ಮೂದ್ ಹೇಳುತ್ತಾರೆ: ಈ ಭಾಷಣವನ್ನು ಯುರೋಪ್ ಮತ್ತು ಅಮೇರಿಕದ ಆಂಗ್ಲರ ನಡುವೆ ಅಥವಾ ಭಾರತ ಮತ್ತು ಪೂರ್ವದ ಜನರ ನಡುವೆ ಹರಡಲಾದರೆ ಖಂಡಿತ ಪ್ರಭಾವ ಬೀರುವುದು.

ಅವರ ಮತ್ತೊಂದು ಭಾಷಣ **'ಇಸ್ಲಾಂ ಮೇ ಇಖ್‌ತಿಲಾಫಾತ್ ಕಾ ಆಗಾಝ್'** (ಇಸ್ಲಾಮಿನಲ್ಲಿ ಬಿರುಕಿನ ಆರಂಭ) ಎಂಬುವುದಾಗಿತ್ತು. ಅದು ಎಷ್ಟು ಜ್ಞಾನಭರಿತ ಮತ್ತು ಇಸ್ಲಾಮಿನ ಚರಿತ್ರೆಯ ಅರಿವು ನೀಡುವ ಭಾಷಣವಾಗಿತ್ತು ಎಂದರೆ, ದೊಡ್ಡ ದೊಡ್ಡ ಚರಿತ್ರೆಗಾರರು ಕೂಡ ಹುಝೂರರ ಮುಂದೆ ಸ್ವತಃ ತಮ್ಮನ್ನು ಶಾಲಾ ಮಕ್ಕಳಂತೆ ಭಾವಿಸುತ್ತಿದ್ದರು. ಇಸ್ಲಾಮಿಯ ಕಾಲೇಜಿನ ಪ್ರೊಫೆಸರ್ ಸಯ್ಯದ್ ಅಬ್ದುಲ್ ಖಾದಿರ್ ಸಾಹಿಬ್ ಹೇಳುತ್ತಾರೆ: ಚರಿತ್ರೆಯಲ್ಲಿ ಅಭಿರುಚಿಯುಳ್ಳವರು ಇಂತಹ ಅಧಿಕೃತ ಲೇಖನವನ್ನು ಹಿಂದೆ ಎಂದೂ ಕಂಡಿರಲಾರರು.

ಇಸ್ಲಾಮಿನ ಆರ್ಥಿಕ ವ್ಯವಸ್ಥೆಯ ಕುರಿತು ಸಹ ಅವರ ಒಂದು ಭಾಷಣವಿದೆ. ಈ ಭಾಷಣ ಎರಡುವರೆ ಗಂಟೆಯದ್ದಾಗಿತ್ತು. ಉನ್ನತ ವಿದ್ಯಾವಂತರಾದ ಸಾವಿರಾರು ಜನರು ಅದನ್ನು ಆಲಿಸಿದ್ದರು. ಲಾಹೋರ್ ಹೈಕೋರ್ಟಿನ ವಕೀಲ ಲಾಲ ರಾಮ್‌ಚಂದ್ ಮಚಂದ ಹೇಳುತ್ತಾರೆ: ನನಗೆ ಈ ಭಾಷಣದಿಂದ ಬಹಳ ಪ್ರಯೋಜನ ಲಭಿಸಿದೆ. ಇಸ್ಲಾಂ ತನ್ನ ಕಾನೂನುಗಳಲ್ಲಿ ಕೇವಲ ಮುಸ್ಲಿಮರ ಕುರಿತು ಮಾತ್ರ ಕಾಳಜಿವಹಿಸುತ್ತದೆ ಎಂದು ನಾನು ಭಾವಿಸಿದ್ದೆ. ಅದು ನನ್ನ ತಪ್ಪುಗ್ರಹಿಕೆಯಾಗಿತ್ತು. ಆದರೆ ಇಸ್ಲಾಂ ಎಲ್ಲ ಮನುಷ್ಯರಲ್ಲಿ ಸಮಾನತೆಯ ಪಾಠವನ್ನು ನೀಡುತ್ತದೆ ಎಂದು ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣದಿಂದ ಇಂದು ನನಗೆ ಗೊತ್ತಾಯಿತು.

1924ರಲ್ಲಿ ಹುಝೂರ್ ಯುರೋಪಿಗೆ ಹೋದಾಗ ಮಾರ್ಗಮದ್ಯೆ ಅರಬ್ ದೇಶಗಳಲ್ಲೂ ತಂಗಿದ್ದರು. ಈ ಸಂಬಂಧವಾಗಿ 1924 ಆಗಸ್ಟ್ 10ರಂದು ಡಮಸ್ಕಸಿನ **ಫತಹುಲ್ ಅರಬ್** ಎಂಬ ವಾರ್ತಾಪತ್ರಿಕೆ ಹೀಗೆ ಬರೆದಿತ್ತು: ಖ಼ಲೀಫರಿಗೆ 40 ವರ್ಷ ಪ್ರಾಯವಿದೆ. ಮುಖದಲ್ಲಿ ಕಪ್ಪು ಮತ್ತು ದಟ್ಟವಾದ ಗಡ್ಡವಿದೆ. ಗೋಧಿ ಬಣ್ಣದ ಮುಖವನ್ನು ಹೊಂದಿರುವರು. ಪ್ರತಾಪ ಮತ್ತು ಸಭ್ಯತೆ ಅವರ ಮುಖದಲ್ಲಿ ಎದ್ದು ಕಾಣುತ್ತಿದೆ. ಎರಡೂ ಕಣ್ಣುಗಳು ವಿವೇಕ, ಬುದ್ಧಿ ಮತ್ತು ಅಸಾಧಾರಣವಾದ ಅರಿವನ್ನು ಪ್ರಕಟಿಸುತ್ತವೆ. ಮಂಜುಗಡ್ಡೆಯಷ್ಟು ಬಿಳಿಬಣ್ಣದ ಮುಂಡಾಸನ್ನು ಧರಿಸಿರುವ ಅವರ ಮುಖದಿಂದ ಅವರ ಬುದ್ಧಿ ಸಾಮರ್ಥ್ಯವನ್ನು ನೋಡಿದರೆ ನೀವು ಅವರನ್ನು ಅರಿಯುವುದಕ್ಕೆ ಮುಂಚಿತವಾಗಿ ನಿಮ್ಮನ್ನು ಸರಿಯಾಗಿ ಅರಿತಿರುವ ವ್ಯಕ್ತಿಯೊಬ್ಬರ ಮುಂದೆ ನಿಂತಿರುವಿರಿ ಎಂದು ನಿಮಗೆ ಖಚಿತವಾಗುವುದು. ಅವರ ತುಟಿಗಳಲ್ಲಿ ಮುಗುಳ್ನಗೆ ಇರುತ್ತದೆ. ಅದು ಕೆಲವೊಮ್ಮೆ ಪ್ರಕಟಗೊಳ್ಳುತ್ತದೆ ಮತ್ತು ಕೆಲವೊಮ್ಮೆ ಅಡಗಿ ಇರುತ್ತದೆ. ಅವರ ಮುಗುಳ್ನಗೆಯಲ್ಲಿ ಅಡಗಿರುವ ಅರ್ಥ ಮತ್ತು ಪ್ರತಾಪವನ್ನು ನೋಡಿದರೆ ನೀವು ಅಚ್ಚರಿಗೊಳ್ಳುವಿರಿ.

ಈ ರೀತಿಯಾಗಿ ಅನೇಕ ಅನಿಸಿಕೆಗಳಿವೆ. ಅನೇಕ ವಿಷಯಗಳನ್ನು ಒಟ್ಟುಗೂಡಿಸಿದ್ದೆ. ಆದರೆ ಸಮಯದ ಪರಿಮಿತಿಯ ಕಾರಣದಿಂದ ಸಂಕ್ಷಿಪ್ತವಾಗಿ ಹೇಳಿರುವೆನು. ಒಟ್ಟಿನಲ್ಲಿ ಭವಿಷ್ಯವಾಣಿಯಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ತಿಳಿಸಿದ್ದ ಎಲ್ಲ ಸಂಗತಿಗಳು ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್(ರ)ರಲ್ಲಿ ಈಡೇರಿದುವು. ಅಲ್ಲಾಹನು ಅವರಿಗೆ ನೀಡಿದ ಅರಿವು ಮತ್ತು ಪರಿಜ್ಞಾನವನ್ನು ಎದುರಿಸಲು ದೊಡ್ಡ ದೊಡ್ಡ ಪಂಡಿತರಿಗೂ ಸಾಧ್ಯವಿರಲಿಲ್ಲ. ಅವರು ನೀಡಿದ ಸಾಹಿತ್ಯಗಳು ಜಮಾಅತಿನ ಒಂದು ಖಜಾನೆಯಾಗಿದೆ. ಅವರ ಖುತ್ಬಗಳು, ಭಾಷಣಗಳು ಇತ್ಯಾದಿಗಳು ಪ್ರಕಟಣೆಗೊಂಡಿವೆ. ಅದನ್ನು ನಾವು ಓದಬೇಕು. ಈಗ ಅದರ ತರ್ಜುಮೆಯ ಕೆಲಸವೂ ನಡೆಯುತ್ತಿವೆ.

ಅಲ್ಲಾಹನು ನಮಗೆ ಅರಿವಿನ ಈ ಭಂಡಾರದಿಂದ ಪ್ರಯೋಜನ ಪಡೆಯಲು ಸೌಭಾಗ್ಯ ನೀಡಲಿ. ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)
*At, **'Masjid Mubarak'**, Islamabad, Tilford, UK, on 17-02-2023*
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon